ಮುಕ್ಕಿ ಮುಚ್ಕಂಡು ನಿನ್ ಮಗ್ಳಿಗೆ ಬುದ್ಧಿ ಹೇಳ್ಕಂಡು ಹಾಳುತ್‌ದಲ್ಲಿ ಇಟ್ಕಂಡ್ಯೋ ಬದುಕ್ತೀಯಾ, ಇಲ್ಲಾ ಅಂದ್ರೆ ಅಷ್ಟೇಯಾ ನಿನ್ ಮಗ್ಳೂ ಉಳ್ಯಲ್ಲ ನೀನೂ ಉಳ್ಯಲ್ಲ,' ಅಂತ ಬಾಯಿಗೆ ಬಂದಂತೆ ಬಡಬಡಿಸಿದ್ದರು. ಖಾಸಿಂ ಸಾಬರು ಕಕರುಮಕರು ಹಿಡಿದವರಂತೆ ನಿಂತುಬಿಟ್ಟಿದ್ದರು. ಆ ಹುಡುಗರಲ್ಲಿ ಬಹುತೇಕರು ಅಪರಿಚಿತ ಮುಖಗಳಾಗಿದ್ದರೂ ಹುಡುಸ್ಲೇಗೌಡನ ಮಗ ವೀರಭದ್ರ ಆಚಾರ್ರ ಶಂಕ್ರಯ್ಯನ ಮಗ ವೀರಾಚಾರಿ ಮುಂತಾದ ತಾವು ಎತ್ತಾಡಿಸಿದ್ದ ಮುಖಗಳಿದ್ದದ್ದು ಖಾಸಿಂ ಸಾಬರಿಗೆ ಪಿಚ್ಚೆನಿಸಿತ್ತು. 'ಈ ಊರ್ನಾಗೆ ನಾವೆಲ್ಲಾ ಒಂತಾಯಿ ಮಕ್ಳಿದ್ದಂಗೆ ಇದೀವಿ, ನೀವ್ಯಾಕ್ರಪ್ಪ ಇದ್ರೊಳ್ಗೆ ಭಿನ್ನೇದ ಮಾಡ್ತೀರಿ?' ಅಂತ ಅಂದದ್ದೇ ತಡ, 'ಹೇಯ್ ಬಾಂಚೋದ್ ಹೇಳ್ದಷ್ಟ್ ಮಾಡು ಇಲ್ಲಾಂದ್ರೆ,' ಅಂತ ಅವರೊಳಗೊಬ್ಬ ಕೈಯೆತ್ತಿಕೊಂಡು ಖಾಸಿಂ ಸಾಬರತ್ತ ನುಗ್ಗಿದ್ದ. ಇನ್ನು ಮಾತಾಡಿದರೆ ಉಳಿಗಾಲವಿಲ್ಲ ಅಂತ ಅಂದದ್ದನ್ನೆಲ್ಲಾ ಅನ್ನಿಸಿಕೊಂಡು ಬಂದಿದ್ದರು. ಈ ಬಗ್ಗೆ ಹೆಂಡತಿ ಮಕ್ಕಳಿಗಿರಲಿ ಊರಿನ ಯಾರೊಬ್ಬರಿಗೂ ತುಟಿಬಿಚ್ಚಿರಲಿಲ್ಲ. ಅದಾದ ಒಂದೆರಡು ದಿನ ಖಾಸಿಂ ಸಾಬರಿಗೆ ಒಳಗೊಳಗೇ ಎಂಥದೋ ಆತಂಕವಿತ್ತು. ಕ್ರಮೇಣ ಆ ಆತಂಕ ಕಡಿಮೆಯಾಗುತ್ತಾ, 'ಯಾವ್ದೋ ತಲೆ ಕೆಟ್ಟೋವು ಏನೋ ಅಂದ್ರು ಅಂತ ಯಾಕೆ ತಲೆ ಕೆಡುಸ್ಕೋ ಬೇಕು,' ಅಂತ ಸಮಾಧಾನಗೊಂಡಿದ್ದರು. ಆದರೆ, ಅದೇಗೋ ಅದು ಶಂಭುಲಿಂಗನ ಕಿವಿಗೆ ಬಿದ್ದಿತ್ತು. ಇದನ್ನಿಂಗೇ ಬಿಟ್ಟರೆ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಂಗಾಗುತ್ತೆ ಅಂತ ಅನಿಸಿ ಆವತ್ತು ಸಂಜೆಯೇ ಅದೇ ತಾನೆ ಮೂಡುತ್ತಾ ಗೌಗತ್ತಲೆಯನ್ನು ಕಲಾಸು ಮಾಡುವ ಹುಮ್ಮಸ್ಸಿನಲ್ಲಿದ್ದ ಚಂದ್ರನ ಬೆಳಕಿನಲ್ಲಿ ಸುಂದ್ರೇಶ ಮೇಷ್ಟರೊಂದಿಗೆ ಒಂದು ತೀರ್ಮಾನಕ್ಕೆ ಬರುವಂತೆ ಮಾಡಿತ್ತು.

## 6

ಊರು ಹತ್ತಿರಾಗುತ್ತಲೇ ಅಡವಪ್ಪನ ಮನಸು ಯಾಕೋ ಗಂಗವ್ವನ ಮನೆಯತ್ತ ವಾಲತೊಡಗಿತು. ಅವಳಿಗಿದನ್ನೆಲ್ಲಾ ಹೇಳಿಕೊಳ್ಳಬೇಕೆನಿಸತೊಡಗಿತು. ಆದರೆ, ಆ ಆಸೆಯನ್ನ ಹಂಗೇ ನಿಲಾಕಿಕೊಂಡು ತನ್ನ ಮನೆಯತ್ತ ಹೊರಟ. ಹಿಂದೆ ಹೊನ್ನಟ್ಟಾಲಯ್ಯನ ಸವಾರಿಯೂ ಸಾಗಿತು. ಆಟೊತ್ತಿಗಾಗಲೇ ಶಂಭುಲಿಂಗ ಮುಬೀನಾಳ ಮದುವೆಯ ಸಂಗತಿ ಅದೇಗೋ ಏನೋ ಊರ ತುಂಬೆಲ್ಲಾ ಎದ್ದು ಬಿದ್ದು ಉಲ್ಡಾಡಿ ಉಸಿರು ಕಟ್ಟಿತ್ತು. ಇನ್ನು ವತಾರೆಗೇ ಸಿಕ್ಕ ಸುದ್ದಿಯಿಂದ ಕಂಗಾಲಾಗಿ ದಿಕ್ಕೆಟ್ಟು ಕೂತಿದ್ದ ಖಾಸಿಂ ಸಾಬರು ಅವರ ಹೆಂಡತಿ ಸಾದಿಕ್ ಬಾನು ಹಾಗೂ ಉಳಿದಿಬ್ಬರು ಮಕ್ಕಳಾದ ಜಬೀನಾ ಶಾಹಿನಾ, ಹೀಗೆ ಇಡೀ ಕುಟುಂಬವೇ ನಾಲಿಗೆಯ ಮೇಲೆ ಒಂತೊಟ್ಟು ನೀರನ್ನೂ ಹಾಕಿಕೊಳ್ಳದೆ ಬಾಗಿಲಿಂದಾಚೆಗೂ ಕಾಲಿಕ್ಕದೆ ಭಯವನ್ನೇ ಉಸಿರಾಡ ಹತ್ತಿತ್ತು. ಅವರ ಗುಡ್ಲು ಮನೆಯ ಮುಂದೆ ಸಾಬರೇ ಸಾಕಿದ್ದ ತಾಯಿ ಕೋಳಿಯೊಂದು ಪುಟಾಣಿ ಮರಿಗಳೊಂದಿಗೆ ಅಂಗಳದಲ್ಲಿ ಸಿಕ್ಕಸಿಕ್ಕದ್ದನ್ನೆಲ್ಲಾ ಕೆದಕುತ್ತಾ ಅಡ್ಡಾಡುತ್ತಿತ್ತು. ಅದಕ್ಕಾಗೇ ಕಾಯುತ್ತಿದ್ದಂತೆ ಬೀದಿ ನಾಯೊಂದು ರಪ್ಪನೆ ಅವುಗಳ ಮೇಲೆರಗಿತು. ಕೋಳಿಗಳೆಲ್ಲಾ ದಿಕ್ಕಾಪಾಲಾಗಿ ಕಣ್ಮೆಂಚಾದವು. ವ್ಯರ್ಥ ಪ್ರಯತ್ನಕ್ಕೆ ಸಿಡಿಮಿಡಿಗೊಂಡ ನಾಯಿ ಬೀದಿಯತ್ತ ಮುಖ ಮಾಡಿ ಒಂದೆರಡು ಸಾರ್ತಿ ಬೊಗುಳಾಕಿ ಅಲ್ಲೇ ತಡಿಕೆಯ ಪಕ್ಕ ದಬ್ಬಾಕಿದ್ದ ಗುಬ್ಬದ ಪಕ್ಕ ಮುಂಗಾಲುಗಳಲ್ಲಿ ಒಂದಷ್ಟು ಮಣ್ಣು ಕೆರೆದು ಗುಣಿಯಂಗೆ ಮಾಡಿಕೊಂಡು ಅದರೊಳಕ್ಕೆ ಮೈಯ್ಯಿಟ್ಟು ಮಲಗಿತು.

ಆರಡಿ ಎತ್ತರದ ಅಡವಪ್ಪ ತನ್ನ ಉದ್ದ ಕತ್ತನ್ನು ಕೆಳಕ್ಕಾಕಿಕೊಂಡು ದಾಪುಗಾಲಿಟ್ಟು ಊರ ಬೀದಿ ತುಳಿಯುತ್ತಿದ್ದಂತೆ ಊರಿಗೂರೇ ತನ್ನತ್ತಲೇ ನೋಡುತ್ತಾ ಕಿತ್ತು ತಿನ್ನುತ್ತಿದೆ ಅನ್ನುವಂಥ ಅನುಭವವಾಗತೊಡಗಿತು. ಕೊರಳಿನಲ್ಲಿ ನೇತುಬಿದ್ದಿದ್ದ ಕರಡಿಗೆ ನಡಿಗೆಯ ಬಿರುವಿಗೆ ಎದೆಯ ಮೇಲೆ ಕುಕ್ಕುಲು ಕುಣಿಯುತ್ತಿತ್ತು. ಬೆತ್ತಲೆದೆಯ ಮೇಲಿನ ಬಿಳಿಗೂದಲುಗಳ ನಡುವಿಂದ ಬೆವರು